ನಿಚ್ಚಂ ಪೊಸತು

ಎ.ವಿ. ಪ್ರಸನ್ನ

# ಕನ್ನಡ ವಿಜಯದ ‘ಕಬ್ಬಿಗರ ಕಾವ’

**‘ಅಚ್ಚ ಕನ್ನಡದಲ್ಲಿ ಕಾವ್ಯ ಬರೆಯುತ್ತೇನೆ. ಸಂಸ್ಕೃತ ಶಬ್ದಗಳನ್ನು ಉಪಯೋಗಿಸುವುದಿಲ್ಲ’ ಎಂದು ಪ್ರತಿಜ್ಞೆಗೈದು ಅದನ್ನು ಸಾಧಿಸಿದ ಕವಿ ಆಂಡಯ್ಯ. ಆತನ ‘ಕಬ್ಬಿಗರ ಕಾವ’ ಏಕೈಕ ಅಚ್ಚಗನ್ನಡ ಕಾವ್ಯ. ‘ಕಬ್ಬಿಗರ ಕಾವ’ ಎಂದರೆ ಕವಿಗಳ ಕಾಮ ಎಂದರ್ಥ. ಈ ಕಾವ್ಯದ ಎಲ್ಲ ಶಬ್ದಗಳೂ ಶುದ್ಧ ಕನ್ನಡವಾಗಿದ್ದು, ಪದ್ಯಗಳಲ್ಲಿನ ವಾಕ್ಯಗಳು ನಾವು ಇಂದು ಮಾತನಾಡುವಂತೆಯೇ ಇವೆ. ಆಂಡಯ್ಯನ ಭಾಷೆ 750 ವರ್ಷಗಳ ಹಿಂದಿನ ಹಳಗನ್ನಡವೆನ್ನಿಸದೇ ಇಂದಿನ ಸರಳಗನ್ನಡವಾಗಿರುವಂತೆಯೇ ತೋರುತ್ತದೆ.**

ಕಸ್ತೂರಿ ಕನ್ನಡ, ಸವಿಗನ್ನಡ, ಮರೆಗನ್ನಡ, ತಿಳಿಗನ್ನಡ, ಅಚ್ಚಗನ್ನಡ, ತಿರುಳ್ಗನ್ನಡ, ಸುದ್ದಗನ್ನಡ, ಪೂರ್ವದ ಹಳಗನ್ನಡ, ಹಳೆಗನ್ನಡ, ನಡುಗನ್ನಡ, ಹೊಸಗನ್ನಡ ಎಂದು ಮುಂತಾಗಿ ಹತ್ತು ಹಲವು ವಿಶೇಷಣಗಳಿಂದ ಕನ್ನಡವು ಕೊಂಡಾಟಕ್ಕೆ ಒಳಗಾಗಿದೆ. ಕನ್ನಡವು ವಿವಿಧ ಕಾಲಘಟ್ಟಗಳಲ್ಲಿ ಬೆಳೆದು ಬಂದಿರುವ ಬಗೆಯನ್ನು ಸಹ ಈ ವಿಶೇಷಣಗಳು ಅಲ್ಲಲ್ಲಿ ಸೂಚಿಸುತ್ತವೆ.

ಯಾವುದೇ ಭಾಷೆಯಾಗಲೀ ಸರ್ವತಂತ್ರ ಸ್ವತಂತ್ರವಾಗಿ ಬೆಳೆಯಲು ಸಾಧ್ಯವಿಲ್ಲ. ಬೇರೆ ಬೇರೆ ಭಾಷೆಗಳ ಪ್ರಭಾವಗಳಿಗೆ ಒಳಗಾಗಿ ತನ್ಮೂಲಕ ಬೆಳವಣಿಗೆ ಹೊಂದುವುದು ಬಹು ಸಾಮಾನ್ಯವಾದ ಪ್ರಕ್ರಿಯೆ. ಬೇರೆ ಭಾಷೆಗಳ ಪ್ರಭಾವಕ್ಕೆ ಒಂದು ಭಾಷೆ ಒಳಗಾಗದೇ ತನ್ನ ಮೂಲ ಸ್ವರೂಪವನ್ನು ಉಳಿಸಿಕೊಂಡಿದೆಯೆಂಬುದು ಆ ಭಾಷೆಯ ಹೆಮ್ಮೆಯೆನಿಸಬಹುದಾದರೂ, ಆ ಭಾಷೆಯ ಬೆಳವಣಿಗೆಯ ನಿಟ್ಟಿನಲ್ಲಿ ಅದೊಂದು ಋಣಾತ್ಮಕ ಅಂಶವೇ! ಆದರೂ ಒಂದು ಭಾಷೆ ನೂರಕ್ಕೆ ನೂರರಷ್ಟು ಸ್ವಂತದ್ದಾಗಿರುವುದು ಅಸಾಧ್ಯವೇ ಸರಿ. ನಮ್ಮ ದೇಶದ ಪ್ರಾಚೀನವೂ ಪ್ರಭಾವಶಾಲಿಯೂ